# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 108(124) |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 27.01.2026 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2021-22, 2022-23, 2023-24, 2024-25, 2025-26 ಸಾಲಿನಲ್ಲಿ ಇಲಾಖೆಯಿಂದ ಸರ್ಕಾರಿ ಜಮೀನು / ಸಿಎ ಸೈಟ್ / ಜಾಗವನ್ನು ರಾಜಕೀಯ ಪಕ್ಷಗಳಿಗೆ / ಕಛೇರಿಗಳಿಗೆ ನೀಡಲಾಗಿದೆಯೇ; ನೀಡಿದ್ದರೆ, ಯಾವ ಸ್ಥಳದಲ್ಲಿ, ಎಷ್ಟು ಜಮೀನನ್ನು ಯಾವ ರಾಜಕೀಯ ಪಕ್ಷಕ್ಕೆ ನೀಡಲಾಗಿದೆ; ನೀಡಿರುವ ಜಮೀನಿನ ಮೌಲ್ಯವೆಷ್ಟು; | ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳು / ಯೋಜನಾ ಪ್ರಾಧಿಕಾರಗಳಲ್ಲಿ / ಮಹಾನಗರ ಪಾಲಿಕೆಗಳಲ್ಲಿ ಲಭ್ಯವಿರುವ ನಾಗರಿಕ ಸೌಲಭ್ಯ ನಿವೇಶನಗಳನ್ನು ಮಂಜೂರು ಮಾಡಲಾಗಿರುವ ವಿವರಗಳನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. |
| ಆ) | ಸದರಿ ಜಮೀನುಗಳನ್ನು ನೀಡಲು ಸರ್ಕಾರ ಅನುಸರಿಸಿರುವ ಕ್ರಮಗಳೇನು; ಯಾವ ಇಲಾಖೆಯ ಪೂರ್ವಾನುಮತಿ ಪಡೆಯಲಾಗಿದೆ? ಯಾವ ಉದ್ದೇಶಕ್ಕಾಗಿ ಸರ್ಕಾರಿ ಜಮೀನನ್ನು ರಾಜಕೀಯ ಪಕ್ಷಗಳಿಗೆ / ಕಛೇರಿಗಳಿಗೆ ನೀಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು); | ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರಗಳು, ಯೋಜನಾ ಪ್ರಾಧಿಕಾರಗಳು, ಮಹಾನಗರ ಪಾಲಿಕೆಗಳು ವಿಚಾರಣಾ ಸಂಕೀರ್ಣಗಳು, ಸಮ್ಮೇಳನಗಳು, ಕಾರ್ಯಾಗಾರಗಳು, ಉಪನ್ಯಾಸ, ಚರ್ಚೆಗಳು, ಕೌಶಲ್ಯಾಭಿವೃದ್ಧಿ, ಗಣಕಯಂತ್ರ ತರಬೇತಿ, ಟೈಲರಿಂಗ್ ತರಬೇತಿ ಮತ್ತು ಮೊಬೈಲ್ ರಿಪೇರಿ ತರಬೇತಿಗಳನ್ನು ನಡೆಸಲು ಹಾಗೂ ಇತರೆ ಸಾರ್ವಜನಿಕ ಉದ್ದೇಶಕ್ಕಾಗಿ ನಾಗರಿಕ ಸೌಲಭ್ಯ ನಿವೇಶನವನ್ನು ಮಂಜೂರು ಮಾಡಲು ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆ, ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿದೆ.<br><br>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳು, 1991 ಹಾಗೂ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರನ್ವಯ ಹಾಗೂ ದಿನಾಂಕ: 24-05-2017 ರ ಅಧಿಸೂಚನೆ ಸಂಖ್ಯೆ: ನಅಇ 27 ಟಿಟಿಪಿ 2016 ರನ್ವಯ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ |
| ಇ) | ಒಂದುವೇಳೆ ರಾಜಕೀಯ ಪಕ್ಷಗಳಿಗೆ ಸರ್ಕಾರಿ ಜಮೀನು / ಸಿಎ ಸೈಟ್/ ಜಾಗವನ್ನು ರಾಜಕೀಯ ಪಕ್ಷಗಳಿಗೆ/ ಕಛೇರಿಗಳಿಗೆ ನೀಡಿದ್ದರೆ, ಯಾವ ನಿಯಮಗಳಡಿ ನೀಡಲಾಗಿರುತ್ತದೆ; ಅದಕ್ಕೆ ಅನುಸರಿಸಿದ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | |

| | | |
|---|---|---|
| | | ಭವನ ಟ್ರಸ್ಟ್ (ರಿ), ಬೆಂಗಳೂರು ಇವರಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂದು ಪ್ರಸ್ತಾವನೆ ಸಲ್ಲಿಸಲಾಗಿದೆ.<br><br>ಆದರೆ, ಇಂತಹ ಪ್ರಸ್ತಾವನೆಗಳನ್ನು ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977 ರ ನಿಯಮ 20(1)(ಬಿ)(ii) ರನ್ವಯ ಸಚಿವ ಸಂಪುಟದ ಮುಂದೆ ಮಂಡಿಸಿ, ಸಚಿವ ಸಂಪುಟವು ಅನುಮೋದಿಸಿರುವಂತೆ ಸದರಿ ನಾಗರಿಕ ಸೌಲಭ್ಯ ನಿವೇಶನಗಳನ್ನು ಮಂಜೂರು ಮಾಡಲಾಗಿದೆ. |

**ಸಂಖ್ಯೆ: ನಅಇ 24 ಬೆಂರೂಪ್ರಾ 2026 (ಇ-ಕಡತ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

# ಅನುಬಂಧ (ವಿ.ಪ ಪ್ರಶ್ನೆ ಸಂಖ್ಯೆ:124 ಕ್ಕೆ)

## ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಯೋಜನಾ ಪ್ರಾಧಿಕಾರಗಳಿಂದ ಹಾಗೂ ಮಹಾನಗರ ಪಾಲಿಕೆಗಳಿಂದ ರಾಜಕೀಯ ಪಕ್ಷಗಳಿಗೆ ಹಂಚಿಕೆ ಮಾಡಲಾದ ಸಿ.ಎ. ನಿವೇಶನಗಳ ವಿವರಗಳು.

| ವರ್ಷ | | ನಗರಾಭಿವೃದ್ಧಿ ಪ್ರಾಧಿಕಾರ / ಯೋಜನಾ ಪ್ರಾಧಿಕಾರ / ಮಹಾನಗರ ಪಾಲಿಕೆಗಳ ಹೆಸರು ಹಾಗೂ ಹಂಚಿಕೆ ಮಾಡಿದ ಸಿ.ಎ. ನಿವೇಶನಗಳ ವಿವರ | ಸಿ.ಎ. ನಿವೇಶನದ ವಿಸ್ತೀರ್ಣ | ಸಿ.ಎ ನಿವೇಶನದ ಮೌಲ್ಯ (ರೂ.ಗಳಲ್ಲಿ) | ಹಂಚಿಕೆಯಾದ ಸಂಸ್ಥೆ |
|---|---|---|---|---|---|
| 2021-22 | | - | - | - | - |
| 2022-23 | | - | - | - | - |
| 2023-24 | | - | - | - | - |
| 2024-25 | | - | - | - | - |
| 2025-26 | 1 | ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ (ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಅಣಕನೂರು ಗ್ರಾಮ) ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 3404.26 ಚ.ಮೀ. | 4,08,51,120/- | ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು. |
| | 2 | ಬಾದಾಮಿ ನಗರ ಯೋಜನಾ ಪ್ರಾಧಿಕಾರ (ಬಾದಾಮಿ ಪಟ್ಟಣ) ಅದರ ಮೌಲ್ಯದ ಶೇ.10% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 613.00 ಚ.ಮೀ. | 24,52,000/- | ಕಾಂಗ್ರೆಸ್ ಭವನ ಸಮಿತಿ ಬಾದಾಮಿ ಬ್ಲಾಕ್ ಗೆ. |
| | 3 | ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ (ಕೊಪ್ಪಳ ಗ್ರಾಮ) ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 3749.85 ಚ.ಮೀ. | 1,31,31,975/- | ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು. |
| | 4 | ಚನ್ನರಾಯಪಟ್ಟಣ ನಗರ ಯೋಜನಾ ಪ್ರಾಧಿಕಾರ (ಚನ್ನರಾಯಪಟ್ಟಣ ಅಮಾನಿಕೆರೆ ಗ್ರಾಮ) ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 210 ಚ.ಮೀ. | 27,30,600/- | ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು. |
| | 5 | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ (ವಿವೇಕಾನಂದ ನಗರ ಬಡಾವಣೆ, ಮಂಡ್ಯ) ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 1457.8 ಚ.ಮೀ. | 1,45,78,000/- | ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು. |
| | 6 | ಗೌರಿಬಿದನೂರು ನಗರ ಯೋಜನಾ ಪ್ರಾಧಿಕಾರ (ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮ) ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 1816.38 ಚ.ಮೀ. | 90,80,900/- | ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು. |

| | | | | | |
|---|---|---|---|---|---|
| | 7 | ಮಾನ್ವಿ ನಗರ ಯೋಜನಾ ಪ್ರಾಧಿಕಾರ (ಮಾನವಿ ತಾಲ್ಲೂಕಿನ ಮಾನವಿ ಗ್ರಾಮ) ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 303 ಚ.ಮೀ. | 37,87,500/- | ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು. |
| | 8 | ಶಹಾಪೂರ ನಗರ ಯೋಜನಾ ಪ್ರಾಧಿಕಾರ (ಹಳಿಸಗರ ಗ್ರಾಮ) ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 2175.26 ಚ.ಮೀ. | 95,71,144/- | ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು. |
| | 9 | ಬಸವಕಲ್ಯಾಣ ನಗರ ಯೋಜನಾ ಪ್ರಾಧಿಕಾರ (ಬಸವಕಲ್ಯಾಣ ತಾಲ್ಲೂಕು, ತ್ರಿಪೂರಾಂತ ಗ್ರಾಮ) ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 707.47 ಚ.ಮೀ. | | ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು. |
| | 10 | ಲಿಂಗಸಗೂರು ನಗರ ಯೋಜನಾ ಪ್ರಾಧಿಕಾರ (ಲಿಂಗಸಗೂರು ತಾಲ್ಲೂಕು, ಹುಲಿಗುಡ್ಡ ಗ್ರಾಮ) ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 1068.00 ಚ.ಮೀ. | 46,99,200/- | ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು. |
| | 11 | ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯ (ಮರಳೂರು ಗ್ರಾಮದ ಸರ್ವೆ.ನಂ:87/2 ರಲ್ಲಿನ 02.00 ಎಕರೆ ಜಾಗವನ್ನು ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | 02.00 ಎಕರೆ ಜಾಗ. | 01 ಎಕರೆಗೆ 1,70,00,000/- (ಒಂದು ಕೋಟಿ ಎಪ್ಪತ್ತು ಲಕ್ಷಗಳು) | ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು. |
| | 12 | ಹುಬ್ಬಳ್ಳಿ –ಧಾರವಾಡ ಮಹಾನಗರ ಪಾಲಿಕೆಯ ಒಡೆತನದಲ್ಲದ್ದ ಹುಬ್ಬಳ್ಳಿ ತಾಲ್ಲೂಕು ಸಿಟಿಎಸ್ ನಂ.4553/ಬಿ ಆಸ್ತಿಯನ್ನು ಅದರ ಮೌಲ್ಯದ ಶೇ.5% ರಷ್ಟನ್ನು ವಿಧಿಸಿ ಮಂಜೂರು ಮಾಡಿದೆ. | ವಿಸ್ತೀರ್ಣ 2988.29 ಚ.ಮೀ | - | ಕರ್ನಾಟಕ ಪ್ರದೇಶ್ ಕಾಂಗ್ರೆಸ್ ಕಮಿಟಿ ಧಾರವಾಡ ರವರಿಗೆ. |

..........................................................................